# ನೆನಪಿನಂಗಳದಿಂದ....

**ಪ್ರವ್ರಾಜಿಕಾ ಭಾರತೀಪ್ರಾಣಾ**

**ನಾ**ನು ಹೀಗೆ ಮನೆ ಬಿಟ್ಟು ಓಡಿಬಂದಿರುವ ವಿಚಾರ ಸುಧೀರಾ ಅಕ್ಕನಿಂದ ಮೊದಲು ತಿಳಿದಾಗ ಶ್ರೀಮಾತೆ ಹೀಗೆ ಹೇಳಿದರಂತೆ: "ಸುಧೀರಾ, ಒಬ್ಬಳು ಹುಡುಗಿಯ ಇಡೀ ಜೀವನದ ಜವಾಬ್ದಾರಿ ಇದು! ಇಂಥ ಕೆಲಸ ಮಾಡಿದ್ದು ನಿನಗೆ ಸರಿ ಎನ್ನಿಸುತ್ತದೆಯೆ?" ಸುಧೀರಾ ಅಕ್ಕ ಉತ್ತರಿಸಿದರು, "ಆಗಿದ್ದು ಆಗಿ ಹೋಯಿತಮ್ಮಾ, ಈಗ ಇನ್ನೇನು ಮಾಡಲಿ?" ಇದಾದನಂತರ ಶ್ರೀಮಾತೆಗೆ ನನ್ನ ಮೇಲೆ ತುಂಬಾ ಸಹಾನುಭೂತಿ ಉಂಟಾಯಿತು. ನನ್ನನ್ನು ದಿನಕ್ಕೊಂದು ಜಾಗದಲ್ಲಿ ಅಡಗಿಸಿಡುವುದನ್ನು ಕಂಡು ಶ್ರೀಮಾತೆ ನನ್ನನ್ನು ನೋಡಿದರೇ ಹೇಳುತ್ತಿದ್ದರು, "ಇನ್ನೆಷ್ಟು ದಿನ ನೀನು ಈ ರೀತಿ ಇರಬೇಕಾಗುತ್ತದಮ್ಮಾ?" ಎಂದು. ಈ ಕಡೆ ನಾನು ಮನೆ ಬಿಟ್ಟು ಬಂದ ಮೇಲೆ ನಮ್ಮ ಮನೆಯಲ್ಲಿ ದೊಡ್ಡ ಗಲಾಟೆ ಆರಂಭವಾಗಿಬಿಟ್ಟಿತು. ಅನೇಕರಿಗೆ ಸುಧೀರಾ ಅಕ್ಕನ ಮೇಲೆಯೇ ಸಂದೇಹ. ಆದರೆ ಸುಧೀರಾ ಅಕ್ಕ ತಮಗೇನೂ ಗೊತ್ತೇ ಇಲ್ಲ ಎಂಬಂತೆ ನಡೆದುಕೊಳ್ಳಲಾರಂಭಿಸಿದರು; ಸುದ್ದಿ ಕೇಳಿದಾಗ ಆಕಾಶದಿಂದ ಬಿದ್ದಂತೆ ಗಾಬರಿಯಾದರು, "ಅವಳನ್ನು ನೋಡಿದರೆ ಅಂಥವಳೆಂದು ಅನ್ನಿಸುವುದಿಲ್ಲವಲ್ಲಾ! ಕೊನೆಗೂ ಓಡಿಯೇಹೋದಳೆ? ಅಯ್ಯೋ ದೇವರೇ, ಎಂಥಾ ಸುದ್ದಿ ಇದು!" ಮನೆಯ ಜನ ಹುಡುಕಿ ಹುಡುಕಿ ಹತಾಶರಾಗಿ ಕೊನೆಯಲ್ಲಿ ಒಬ್ಬ ಜ್ಯೋತಿಷಿಯನ್ನು ಕೇಳಿದರು. ಆ ಜ್ಯೋತಿಷಿ ಅವರಿಗೆ ಹೇಳಿದರು, "ನಿಮ್ಮ ಮಗಳು ತುಂಬ ಒಳ್ಳೆಯ ಆಶ್ರಯದಲ್ಲಿದ್ದಾಳೆ. ತುಂಬ ಮಹತ್ತಾದ ಆಶ್ರಯ ಪಡೆದಿದ್ದಾಳೆ." ಈ ಮಾತನ್ನು ಕೇಳಿ ಅವರೆಲ್ಲಾ ಸ್ವಲ್ಪ ಮಟ್ಟಿಗೆ ನಿಶ್ಚಿಂತರಾದರು.

ಒಂದು ದಿನ ಮನೆಯಲ್ಲಿ ಸುಧೀರಾ ಅಕ್ಕ ಇರಲಿಲ್ಲ. ಆ ಸಮಯದಲ್ಲಿ ನಮಗೆ ಪರಿಚಯವಿದ್ದ ಬಾಗ್‌ಬಜಾರಿನ ಒಬ್ಬ ಹೆಂಗಸು ಸುಧೀರಾ ಅಕ್ಕನಿಂದ ಸಹಾಯ ಪಡೆಯುತ್ತಿದ್ದಳು. ಆ ದಿನ ಅವಳು ಬಂದುದು, ನನಗೆ ಗೊತ್ತಾಗಲಿಲ್ಲ. ನಾನು ಅಡುಗೆಯ ಮನೆಯಲ್ಲಿದ್ದೆ. ನನ್ನನ್ನು ಅಲ್ಲಿ ಕಂಡವಳೇ ಆಶ್ಚರ್ಯದಿಂದ ಗರಬಡಿದಂತಾದಳು. ನನಗೂ ಏನೂ ಹೇಳಲು ತೋಚಲಿಲ್ಲ. ಭಯದಿಂದ ಮರದ ತುಂಡಿನಂತಾಗಿಬಿಟ್ಟಿದ್ದೆ. ಸುಧೀರಾ ಅಕ್ಕ ಸಿಕ್ಕದಿದ್ದರಿಂದ ಆಕೆ ಹೊರಟುಹೋದಳು. ಸುಧೀರಾ ಅಕ್ಕ ಮನೆಗೆ ಹಿಂತಿರುಗಿದ ಮೇಲೆ ವಿಷಯ ತಿಳಿದು ರೇಗಿಬಿಟ್ಟರು, "ಈಗ ಸರಿಯಾಯಿತು ತಾನೆ? ನಾನು ಜೈಲಿಗೆ ಹೋಗುತ್ತೇನೆ, ನಿನ್ನನ್ನೂ ಕರೆದುಕೊಂಡು...." ಮರುದಿನವೇ ಕೆಲಸದವಳ ಜೊತೆಮಾಡಿ ನನ್ನನ್ನು ಹರಿಪಾಲಿಗೆ ಕಳಿಸಿದರು. ಅಲ್ಲಿ ನನಗೆ ಮಲೇರಿಯಾ ಶುರುವಾಯಿತು. ಸುಧೀರಾ ಅಕ್ಕನ ಸಹೋದರಿ ಒಬ್ಬರೇ ಅಲ್ಲಿದ್ದರು. ನೋಡಿಕೊಳ್ಳಲೂ ಸಾಧ್ಯವಾಗದೆ ಸುಧೀರಾ ಅಕ್ಕನಿಗೆ ಸುದ್ದಿ ತಿಳಿಸಿದರು. ಮತ್ತೆ ನನ್ನನ್ನು ಕೊಲ್ಕತಾಗೆ ಕರೆಸಿಕೊಂಡರು. ನನಗೆ ಜ್ವರ ಬಿಡುತ್ತಲೇ ಇಲ್ಲ.

ಸುಧೀರಾ ಅಕ್ಕ ಬಹಳ ಚಿಂತೆಯಲ್ಲಿ ಮುಳುಗಿದರು. ಸ್ವಾಮಿ ಪ್ರಜ್ಞಾನಂದರು ಆಗ ಉದ್ಬೋಧನದಲ್ಲಿದ್ದರು. ಅವರ ಪ್ರೇರಣೆಯಿಂದಲೇ ಸುಧೀರಾ ಅಕ್ಕ ನನ್ನ ಜವಾಬ್ದಾರಿ ಹೊತ್ತುಕೊಳ್ಳುವ ಸಾಹಸ ಮಾಡಿದ್ದರು. ಸುಧೀರಾ ಅಕ್ಕ ಈಗ ಉದ್ಬೋಧನಕ್ಕೆ ಓಡಿದರು. ಪ್ರಜ್ಞಾನಂದರೊಡನೆ ಸಮಾಲೋಚನೆ ಮಾಡಿ ಒಂದು ಉಪಾಯ ಹುಡುಕಿದರು. ಪ್ರಿಯಬಾಲಾ ಎಂಬ ಹೆಂಗಸು ತಾರಕೇಶ್ವರದಿಂದ ಪತ್ರ ಬರೆದಂತೆ ಒಂದು ಪತ್ರ ಸಿದ್ಧಮಾಡಿದರು, "ಒಬ್ಬಳೇ ತರುಣಿ ಇಲ್ಲಿ ಒಬ್ಬಳೇ ಓಡಾಡಿಕೊಂಡಿರುವುದನ್ನು ನೋಡಿ ಅವಳು ಮನೆಯಿಂದ ಓಡಿಬಂದಿರಬೇಕೆಂದು ಸಂದೇಹ ಬಂದಿದೆ. ತುಂಬ ಕಷ್ಟಪಟ್ಟು ಅವಳ ಹೆಸರು, ವಿಳಾಸವನ್ನೆಲ್ಲಾ ಸಂಗ್ರಹಿಸಿದ್ದೇವೆ. ಆಕೆ ನಿಮ್ಮ ಬಳಿ ಹೋಗಲು ಇಚ್ಛಿಸುತ್ತಿಲ್ಲ. ಜೊತೆಗೆ ಕಾಯಿಲೆಯಿಂದ ಬೇರೆ ನರಳುತ್ತಿದ್ದಾಳೆ. ನನ್ನ ಒಬ್ಬಳು ಸ್ನೇಹಿತೆ ಸುಧೀರಾ ಕೊಲ್ಕತಾದಲ್ಲಿದ್ದಾಳೆ. ಅವಳ ಹತ್ತಿರ ಹುಡುಗಿಯನ್ನು ಕಳಿಸಿದ್ದೇನೆ" – ಹೀಗೆಲ್ಲಾ ಬರೆದು ನಂ. ೧೭ ಬೋಸ್ ಪಾರಾದ ವಿಳಾಸಕ್ಕೆ ಪೋಸ್ಟ್ ಮಾಡಿದರು.

ಇದನ್ನೆಲ್ಲಾ ಕೇಳಿ ನನಗೆ ಅತ್ಯಂತ ಭಯವಾಯಿತು. ಜ್ವರದಿಂದ ಶರೀರ ದುರ್ಬಲವಾಗಿತ್ತು. ಜೊತೆಗೆ ಮನಸ್ಸಿನಲ್ಲಿ ದುಗುಡ ಬೇರೆ. ಮನೆಯವರು ಪತ್ರ ಸಿಕ್ಕ ಕೂಡಲೇ ಬಂದು ನನ್ನನ್ನು ಎಳೆದುಕೊಂಡು ಹೋಗುತ್ತಾರೆ. ಈ ಯೋಚನೆಯಿಂದಲೇ ಜ್ವರ ಮತ್ತೂ ಏರಿತು. ಎರಡು ಮೂರು ಸಲ ಜ್ಞಾನ ತಪ್ಪಿದಂತಾಯಿತು. ಸುಧೀರಾ ಅಕ್ಕ ಹೆದರಿ ಡಾಕ್ಟರನ್ನು ಕರೆದರು, "ಇವಳನ್ನು ಉಳಿಸಿಕೊಳ್ಳಲು ಸಾಧ್ಯವಾದರೆ ಸಾಕು ..." ಎನ್ನಲಾರಂಭಿಸಿದರು.

ನನ್ನ ತಾಯಿ ಪತ್ರ ಸಿಕ್ಕೊಡನೇ ಸುಧೀರಾ ಅಕ್ಕನ ಮನೆಗೆ ಬಂದರು. ನನ್ನನ್ನು ಕಂಡೊಡನೇ ಕಣ್ಣೀರು ಕರೆಯುತ್ತಾ ತಲೆ ಮೈಯನ್ನು ನೇವರಿಸಲಾರಂಭಿಸಿದರು. ಸುಧೀರಾ ಅಕ್ಕ ನಿರ್ವಿಕಾರಚಿತ್ತದಿಂದ ಅವರನ್ನು ಕೇಳಿದರು, "ನೀವೇನು ಈ ಹುಡುಗಿಯನ್ನು ಈಗ ಕರೆದುಕೊಂಡು ಹೋಗುತ್ತೀರಾ?" ನನ್ನ ತಾಯಿ ಹೇಳಿದರು, "ಇಲ್ಲವಮ್ಮಾ, ಇವಳು ನಿನ್ನ

ಬಳಿಯೇ ಇರಲಿ. ಮನೆಗೆ ಬಂದರೆ ಮತ್ತೆಲ್ಲಾದರೂ ಓಡಿಹೋಗುತ್ತಾಳೆ." ನನ್ನ ಬಳಿ ಸುಮಾರು ಹೊತ್ತು ಕುಳಿತಿದ್ದು, ಅನಂತರ ಅಮ್ಮ ಮನೆಗೆ ಹಿಂತಿರುಗಿದರು. ನನ್ನ ಮನಸ್ಸಿನಲ್ಲಿದ್ದ ಆತಂಕ ದೂರವಾಯಿತು. ಕೆಲವು ದಿನ ಔಷಧಿ ತೆಗೆದುಕೊಂಡ ಮೇಲೆ ಕಾಯಿಲೆ ವಾಸಿಯಾಯಿತು.

೧೯೧೧ರ, ಅಕ್ಟೋಬರ್ ೧೩ ರಂದು ಸಿಸ್ಟರ್ ನಿವೇದಿತಾ ತೀರಿಕೊಂಡರು. ಇದರಿಂದ ತುಂಬ ನೊಂದುಕೊಂಡ ಸುಧೀರಾ ಅಕ್ಕ ಕಾಯಿಲೆ ಹಿಡಿದು ಮಲಗಿದರು. ನವೆಂಬರ್ ಕೊನೆಯಲ್ಲಿ ಹವೆಯ ಬದಲಾವಣೆಗೆಂದು ನರೇಶಳನ್ನು ಮತ್ತು ನನ್ನನ್ನು ಕರೆದುಕೊಂಡು ಕಾಶಿಗೆ ಹೋದರು. ಅಲ್ಲಿ ಅವರ ಸೋದರತ್ತೆಯ ಮಗನ ಮನೆಯಲ್ಲಿದ್ದೆವು. ಸುಧೀರಾ ಅಕ್ಕ ಗಂಗೆಯ ದಡದಲ್ಲಿ ಕುಳಿತು ಬಹು ಹೊತ್ತು ಜಪ ಮಾಡುತ್ತಿದ್ದರು. ಶಿವರಾತ್ರಿಯ ದಿನ ವಿಶ್ವನಾಥನ ದೇವಸ್ಥಾನದಲ್ಲಿ ವಿಪರೀತ ನೂಕುನುಗ್ಗಲು. ಒಳಗೆ ಹೋಗಲು ಸಾಧ್ಯವಾಗಲಿಲ್ಲ. ಸುಧೀರಾ ಅಕ್ಕ ಹೇಳಿದರು, "ಶಿವರಾತ್ರಿಯ ದಿನ ಕಾಶಿಯಲ್ಲಿದ್ದು ಶಿವಪೂಜೆ ಮಾಡದಿದ್ದರೆ ಹೇಗೆ!" ಮಣ್ಣಿನ ಪಾತ್ರೆ, ಹೂವು, ಹಣ್ಣು, ಸಿಹಿತಿಂಡಿ ಮುಂತಾದುವುಗಳನ್ನು ಕೊಂಡುಕೊಂಡೆವು. ಗಂಗೆಯ ದಡದ ಮಣ್ಣಿನಲ್ಲಿ ಶಿವಲಿಂಗವನ್ನು ಮಾಡಿ ರಾತ್ರಿಯೆಲ್ಲ ಪೂಜೆ ಮಾಡಿದೆವು. ಶಿವಪೂಜೆ ಮಾಡುವುದು ನನಗೆ ಚೆನ್ನಾಗಿ ಗೊತ್ತಿತ್ತು. ಮನೆಯಲ್ಲಿದ್ದಾಗ ನಾನು ದಿನವೂ ಶಿವಪೂಜೆ ಮಾಡುತ್ತಿದ್ದೆ. ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯ ಚಿತ್ರಗಳನ್ನು ಎದುರಿಗಿಟ್ಟುಕೊಂಡು ಸುಧೀರಾ ಅಕ್ಕ ಇಡೀ ರಾತ್ರಿ ಜಪ ಮಾಡಿದರು. ಬೆಳಗಿನ ಜಾವ ಮೂರು ಗಂಟೆಗೆ ಎದ್ದು ಹೇಳಿದರು, "ನಡೆಯಿರಿ, ವಿಶ್ವನಾಥನ ದರ್ಶನಕ್ಕೆ." ನಾವು ಬೇಗ ಬೇಗ ನಾಲ್ಕನೆಯ ಜಾವದ ಪೂಜೆ ಮುಗಿಸಿದೆವು. ರಸ್ತೆಯಲ್ಲಿ ಕತ್ತಲೋ ಕತ್ತಲು. ಮೋಂಬತ್ತಿ ಹೊತ್ತಿಸಿಕೊಂಡು ಮೂರು ಜನರೂ ನಡೆದುಕೊಂಡೇ ವಿಶ್ವನಾಥನ ಮಂದಿರವನ್ನು ತಲುಪಿದೆವು. ಆ ದಿನ ತುಂಬ ಆನಂದದಲ್ಲಿ ಕಳೆಯಿತು.

ಕಾಶಿಯಲ್ಲಿ ಸುಧೀರಾ ಅಕ್ಕನ ವೈರಾಗ್ಯಭಾವ ತೀವ್ರವಾಗಿ ಎದ್ದು ಕಾಣುತ್ತಿತ್ತು. ಅವರ ಜೊತೆ ಇದ್ದುದರಿಂದ ನಮ್ಮಲ್ಲಿಯೂ ಭಗವಂತನ ಬಗೆಗೆ ಅನುರಾಗ, ವ್ಯಾಕುಲತೆ ತುಂಬ ಹೆಚ್ಚಾಯಿತು. ನಾವೂ ಬಹಳ ಹೊತ್ತು ಜಪ, ಧ್ಯಾನ ಮಾಡುತ್ತಿದ್ದೆವು. ನವನಳಿನಿ ಎಂಬ ವೈಷ್ಣವ ಸಂಪ್ರದಾಯದ ಒಬ್ಬ ಮಹಿಳೆ, ಸಿಸ್ಟರ್ ನಿವೇದಿತಾರ ವಿಚಾರ ತಿಳಿದು, ಅವರನ್ನು ಕಾಣುವ ಇಚ್ಛೆಯಿಂದ ಪತ್ರ ಬರೆದಿದ್ದಳು. ಸಿಸ್ಟರ್ ಆ ಹೊತ್ತಿಗಾಗಲೇ ಜೀವತ್ಯಾಗ ಮಾಡಿದ್ದರು. ಆಕೆಯ ಪತ್ರಕ್ಕೆ ಸುಧೀರಾ ಅಕ್ಕ ಉತ್ತರ ನೀಡಿದ್ದರು. ಇದಾದ ನಂತರ ಇಬ್ಬರ ನಡುವೆ ಪತ್ರವ್ಯವಹಾರ ನಡೆಯುತ್ತಲೇ ಇತ್ತು. ಒಬ್ಬರನ್ನೊಬ್ಬರು ನೋಡದೆ ಇದ್ದರೂ ಒಳ್ಳೆಯ ಸ್ನೇಹಿತೆಯರಾಗಿಬಿಟ್ಟರು.

ಬೃಂದಾವನಕ್ಕೆ ಹೋಗುವ ಮಾರ್ಗದಲ್ಲಿ ಕಾಶಿಯಲ್ಲಿ ಇಳಿದು ಸುಧೀರಾ ಅಕ್ಕನನ್ನು ಕಾಣುವೆನೆಂದು ನವನಳಿನಿ ಬರೆದಿದ್ದಳು. ಸ್ಟೇಶನ್ನಿಗೆ ಹೋಗಿ ಸುಧೀರಾ ಅಕ್ಕ ಆಕೆಯನ್ನು ಕರೆತಂದರು. ಆಕೆ ಅತ್ಯಂತ ಸುಂದರಿಯಾಗಿದ್ದಳು; ತ್ಯಾಗ ವೈರಾಗ್ಯಸಂಪನ್ನೆ. ಆಕೆಗೆ ಮದುವೆಯಾಗಿತ್ತು. ಆದರೆ ಸಂಸಾರದಲ್ಲಿ ಇರಲಿಲ್ಲ. ಬಿಳಿಯ ಬಟ್ಟೆಯನ್ನು ಉಡುತ್ತಿದ್ದಳು. ನಾಲ್ಕು, ಐದು ದಿನಗಳು ಕಾಶಿಯಲ್ಲಿ ಕಳೆದ ನಂತರ ಆಕೆ ಹೇಳಿದಳು, "ಸುಧೀರಾ, ಇದು ಜ್ಞಾನದ ರಾಜ್ಯ. ನಾನು ಪ್ರೇಮ ಭಕ್ತಿಯ ತವರೂರಾದ ಬೃಂದಾವನಕ್ಕೆ ಹೋಗುತ್ತೇನೆ." ಸುಧೀರಾ ಅಕ್ಕ ಕೂಡಲೇ ಹೇಳಿದರು, "ಒಳ್ಳೇದು, ನಾವೆಲ್ಲಾ ಆ ಪ್ರೇಮದ ರಾಜ್ಯಕ್ಕೇ ಹೋಗೋಣ, ನಡೆಯಿರಿ." ನವನಳಿನಿಗೆ ಆಕೆಯ ಮನೆಯವರು ತಿಂಗಳಿಗೆ ೨೫ ರೂಪಾಯಿಗಳನ್ನು ಕಳುಹಿಸುತ್ತಿದ್ದರು. ಆಗಿನ ಕಾಲದಲ್ಲಿ ಈ ಹಣ ತುಂಬ ಹೆಚ್ಚೇ ಎಂದು ಹೇಳಬೇಕು. ಈ ಹಣದಿಂದ ನಾವು ಮೂವರೂ ಒಳ್ಳೇ ಆರಾಮವಾಗಿಯೇ ಇರಬಹುದೆಂದು ಆಕೆ ಹೇಳಿದಳು.

ಸುಧೀರಾ ಅಕ್ಕನಿಗೆ ಆಗ ತೀವ್ರ ವೈರಾಗ್ಯ ಬಂದುಬಿಟ್ಟಿತ್ತು. ಕಾಶಿಯಲ್ಲಿ ಅವರು ಉನ್ನತ ಭಾವದಲ್ಲಿ ಇರುತ್ತಿದ್ದರು. ಈಗ ಬೃಂದಾವನಕ್ಕೆ ಹೋಗಿ ಅಲ್ಲಿಯ ಭಾವಕ್ಕೆ ಅನುಗುಣವಾಗಿ, ತಪಸ್ಸು ಮಾಡಲು ಸಿದ್ಧರಾಗಿಬಿಟ್ಟರು. ಬೃಂದಾವನಕ್ಕೆ ಹೋಗುವ ಮುಂಚೆ ನರೇಶಳನ್ನು ಕೊಲ್ಕತಾಗೆ ವಾಪಸ್ಸು ಕಳಿಸಿದರು. ರಾತ್ರಿ ರೈಲನ್ನು ಹತ್ತಿ ನಾವು ಮೂವರೂ ಮಲಗಿ ಚೆನ್ನಾಗಿ ನಿದ್ರೆ ಮಾಡಿದೆವು. ರೈಲು ಮಥುರಾ ತಲುಪಿದ್ದು ನಮಗೆ ಗೊತ್ತೇ ಆಗಲಿಲ್ಲ. ಕೂಲಿ ಒಳಗೆ ಬಂದು ಕೂಗಾಡಿ ನಮ್ಮನ್ನು ಎಬ್ಬಿಸಿದನು. ಅಲ್ಲಿ ಇಳಿದು ಮತ್ತೆ ಬೃಂದಾವನದತ್ತ ಹೋಗುವ ರೈಲನ್ನು ಹತ್ತಿದೆವು. ನವನಳಿನಿಯ ಪತ್ರವನ್ನು ನೋಡಿ ಬೃಂದಾವನದಲ್ಲಿ ನಿತ್ಯಾನಂದದಾಸ ಬಾಬಾಜಿ ಎಲ್ಲಾ ವ್ಯವಸ್ಥೆ ಮಾಡಿದ್ದರು. ಒಂದು ಎತ್ತಿನಗಾಡಿಯಲ್ಲಿ ನಮ್ಮನ್ನು ಕರೆದೊಯ್ಯಲು ಸ್ಟೇಶನ್ನಿಗೆ ಬಂದಿದ್ದರು.

ಗೋವಿಂದ ಮಹಲ್‌ನ ಗೋಪಿದಾಸಿಯ ಮನೆಯಲ್ಲಿ ನಮ್ಮನ್ನು ಬಿಟ್ಟರು. ಆ ಮನೆಯಲ್ಲಿ ಮೂರು ಕೋಣೆಗಳಿದ್ದವು. ಅಲ್ಲಿ ನೀರಿನ ಅಭಾವವಿತ್ತು. ಎರಡು ಪೈಸೆ ಕೊಟ್ಟರೆ ಎರಡು ಹಂಡೆಯಷ್ಟು ನೀರು ಕೊಡುತ್ತಿದ್ದರು. ಮಣ್ಣಿನ ಪಾತ್ರೆಗಳಲ್ಲಿ ನೀರನ್ನು ತುಂಬಿಸಿ ಇಟ್ಟೆವು. ಗೋಪಿದಾಸಿ ತುಂಬ ಒಳ್ಳೆಯ ಮಹಿಳೆ. ನಾನು ಆಕೆಯನ್ನು 'ಗೋಪಿ ದೀದಿ' ಎಂದು ಕರೆಯುತ್ತಿದ್ದೆ. ನಮ್ಮೆಲ್ಲರಿಗಾಗಿ ಗೋವಿಂದನಿಗೆ ನೈವೇದ್ಯ ಮಾಡಿದ ಅನ್ನದ ವ್ಯವಸ್ಥೆ ಮಾಡಿದ್ದರು. ಇದಕ್ಕೆ

'ಪಾರಸ್' ಎನ್ನುತ್ತಿದ್ದರು. ತಿಂಗಳಿಗೆ ಮೂರು ರೂಪಾಯಿ ಕೊಟ್ಟರೆ ದಿನವೂ 'ಪಾರಸ್' ಸಿಗುತ್ತಿತ್ತು. ಮನೆಗೆ ಅದನ್ನು ತಲುಪಿಸುವವನಿಗೆ ನಾಲ್ಕು ಆಣೆ ಕೊಡಬೇಕಾಗಿತ್ತು. ಅನ್ನ ಸ್ವಲ್ಪವೇ ಇರುತ್ತಿತ್ತು. ಆದರೂ ತರಕಾರಿ, ಮೊಸರು, ಪಾಯಸ, ಬೇಳೆಸಾರು ಹಾಗೂ ಹದಿನಾರು ರೊಟ್ಟಿಗಳನ್ನು ಕೊಡುತ್ತಿದ್ದರು. ಮಧ್ಯಾಹ್ನ ಮೂರು ಜನರೂ ಇವನ್ನು ಭಾಗ ಮಾಡಿಕೊಂಡು ಊಟ ಮಾಡುತ್ತಿದ್ದೆವು. ರಾತ್ರಿ ದೇವಸ್ಥಾನದಿಂದ ಹಿಂತಿರುಗುವಾಗ ಅಂಗಡಿಯಿಂದ ಪುರಿ, ತರಕಾರಿ, ಲಡ್ಡುಗಳನ್ನು ಕೊಂಡು ತಿನ್ನುತ್ತಿದ್ದೆವು. ಅಡುಗೆ ಮಾಡುವ ತಾಪತ್ರಯವೇ ಇರಲಿಲ್ಲ. ಬೆಳಗಿನ ಜಾವ ಯಮುನಾ ನದಿಯಲ್ಲಿ ಸ್ನಾನ ಮಾಡಿ ಹಿಂತಿರುಗುವಾಗ ಒಂದು ಪೈಸೆಯ ಖಾರದ ಛೋಲಾ (ಕಡಲೆ ಕಾಳು ಗುಗ್ಗರಿ) ಕೊಂಡು ತಿನ್ನುತ್ತಿದ್ದೆವು. ಎರಡು ದಿನಕ್ಕೆ ಸಾಕಾಗುವಷ್ಟು ಛೋಲಾ ಸಿಗುತ್ತಿತ್ತು. ಜಪ, ಧ್ಯಾನ, ದೇವಸ್ಥಾನಗಳಲ್ಲಿ ದೇವರ ದರ್ಶನ – ಇದೇ ಇಡೀ ದಿನದ ಕೆಲಸವಾಗಿತ್ತು. ಸುಧೀರಾ ಅಕ್ಕ ಹಾಗೂ ನವನಳಿನಿ ಜಪ ಧ್ಯಾನದಲ್ಲಿ ಮುಳುಗಿಹೋಗುತ್ತಿದ್ದರು. ನಾನೂ ಅವರ ಜೊತೆ ಕುಳಿತು ಬಹಳಷ್ಟು ಕಾಲ ಜಪ ಮಾಡುತ್ತಿದ್ದೆ.

ಗೋಪಿದಾಸಿಯ ಮನೆಯಲ್ಲಿ ರಾಧಾಕೃಷ್ಣರ ಪೂಜೆ, ಸೇವೆ ನಡೆಯುತ್ತಿತ್ತು. ಆಕೆಯ ವಯಸ್ಸು ಅರುವತ್ತು. ಆಕೆಯ ತಾಯಿಗೆ ಎಂಬತ್ತು ವರ್ಷ. ಆಕೆಯ ಅಣ್ಣನಿಗೆ ಅರುವತ್ತೆರಡು ವರ್ಷಗಳಿರಬೇಕು. ಮೂವರೂ ಬೃಂದಾವನದಲ್ಲಿ ಪೂಜೆ, ಭಜನೆಗಳಲ್ಲಿ ಕಾಲ ಕಳೆಯುತ್ತಿದ್ದರು. ಅವರು ತುಂಬಾ ಬಡವರು. ತಿನ್ನಲು ಉಡಲು ಕಷ್ಟವಿದ್ದರೂ, ಅತ್ಯಂತ ಭಕ್ತಿ ಇದ್ದುದರಿಂದ ಕೀರ್ತನೆ ಭಜನೆಗಳಲ್ಲಿ ಕಾಲ ಕಳೆಯುತ್ತ ಬಹಳ ಆನಂದವಾಗಿರುತ್ತಿದ್ದರು. ಸುಧೀರಾ ಅಕ್ಕನೂ ಅವರ ಜೊತೆಗೆ ಕೀರ್ತನೆಯಲ್ಲಿ ಭಾಗವಹಿಸುತ್ತಿದ್ದರು. ಅವರು ಹೊಸ ಹೊಸ ಕೀರ್ತನೆಗಳನ್ನು ಕಲಿಯುತ್ತಿದ್ದರು. ಕಥಾಮೃತದ (ರಾಮಕೃಷ್ಣ ವಚನವೇದ) ಪುಸ್ತಕದ ಮೇಲೆ ಶ್ರೀರಾಮಕೃಷ್ಣರು, ಶ್ರೀಮಾತೆ ಮತ್ತು ಸ್ವಾಮೀಜಿಯವರ ಫೋಟೋಗಳನ್ನು ಇಟ್ಟು, ಅವುಗಳ ಎದುರು ಕುಳಿತುಕೊಂಡು ಜಪ, ಧ್ಯಾನಗಳಲ್ಲಿ ತನ್ಮಯರಾಗುತ್ತಿದ್ದರು. ನವನಳಿನಿಯ ಜೊತೆ ಆಕೆಯ ಭಾವಕ್ಕೆ ತಕ್ಕಂತೆ ಸಂಭಾಷಣೆ ನಡೆಸುತ್ತ ಆನಂದಪಡುತ್ತಿದ್ದರು. ಎಲ್ಲ ರೀತಿಯ ಆಚಾರ, ವಿಚಾರ ಭಾವಗಳ ಜೊತೆ ಸುಧೀರಾ ಅಕ್ಕ ಒಂದಾಗಿ ಬಿಡುತ್ತಿದ್ದರು. ಆದರೆ ನನ್ನ ಜೊತೆ ಈ ವಿಚಾರವಾಗಿ ಹೆಚ್ಚಾಗೇನೂ ಮಾತನಾಡುತ್ತಿರಲಿಲ್ಲ. ನನಗೆ ಈ ವೈಷ್ಣವ ಭಾವಭಕ್ತಿಗಳು ಅಷ್ಟೊಂದು ಇಷ್ಟವಾಗುತ್ತಿಲ್ಲವೆಂದು ಅವರಿಗೆ ಗೊತ್ತಾಗಿಹೋಗಿತ್ತು.

ಒಂದು ತಿಂಗಳು ಈ ರೀತಿ ಕಳೆದುಹೋಯಿತು. ಸುಧೀರಾ ಅಕ್ಕನಿಗೆ ಅವರ ಅಣ್ಣ ಸೀಮ್ಲಾಕ್ಕೆ ಬರುವಂತೆ ಕಾಗದ ಬರೆದರು. ಸುಧೀರಾ ಅಕ್ಕ ನನಗೆ ಅನೇಕ ರೀತಿಯಲ್ಲಿ ಪರಿಸ್ಥಿತಿಯನ್ನು ಅರ್ಥಮಾಡಿಸಿ, ತುಂಬ ಉಪದೇಶ ಕೊಟ್ಟು, ಎಚ್ಚರಿಕೆಯನ್ನು ಹೇಳಿ ಹೊರಡಲು ಸಿದ್ಧರಾದರು. ಅವರು ಮತ್ತೆ ಮತ್ತೆ ಹೇಳಿದರು, "ನವನಳಿನಿಯನ್ನು ನನ್ನನ್ನು ನೋಡಿದಂತೆಯೇ ನೋಡು. ಇನ್ನೊಂದು ತಿಂಗಳಲ್ಲಿ ನಾನು ಹಿಂತಿರುಗಿಬಿಡುತ್ತೇನೆ." ಅದಲ್ಲದೆ, ಗೋಪಿದಾಸಿಗೂ ಹೇಳಿದ್ದರಂತೆ, "ನವನಳಿನಿಯ ಜೊತೆ ಸರಳಾಗೆ ಹೊಂದಿಕೊಳ್ಳಲು ಸಾಧ್ಯವಾಗದಿದ್ದರೆ ಆಕೆಯನ್ನು ನಿನ್ನ ಜೊತೆ ಇಟ್ಟುಕೋ" ಎಂದು. ಗೋಪಿದಾಸಿ ಸುಧೀರಾ ಅಕ್ಕನ ಮಾತಿನಂತೆಯೇ ನಡೆದುಕೊಂಡರು. ಸುಧೀರಾ ಅಕ್ಕ ಶ್ರೀರಾಮಕೃಷ್ಣರ ಫೋಟೋ ಮತ್ತು 'ರಾಮಕೃಷ್ಣ ವಚನವೇದ' ಪುಸ್ತಕಗಳನ್ನು ನನಗೆ ಕೊಟ್ಟು ಹೀಗೆ ಹೇಳಿದರು: "ಇವರನ್ನು ಬಿಟ್ಟು ನಿನ್ನದೆನ್ನುವುದು ಇನ್ನೇನೂ ಇಲ್ಲ ಎನ್ನುವುದನ್ನು ಅರ್ಥಮಾಡಿಕೊ." ಸುಧೀರಾ ಅಕ್ಕ ಹೊರಟುಹೋದ ಮೇಲೆ ನನಗೆ ಪ್ರಾಣವೇ ಹೋದಂತಾಯಿತು. ನನಗಿನ್ನೇನು ಗತಿ ಎನ್ನಿಸಿತು. ಅವರು ಹೊರಡುವಾಗ ಹೇಳಿದ ಮಾತುಗಳನ್ನು ಜ್ಞಾಪಿಸಿಕೊಳ್ಳುತ್ತ ಮನಸ್ಸಿಗೆ ಸಮಾಧಾನ ತಂದುಕೊಂಡೆ. (ಮುಂದುವರಿಯುವುದು)

## ಎಲ್ಲವನ್ನೂ ಕೊಡುತ್ತಿರುವ ಪರಿಸರಕ್ಕೆ ನಾವು ಕೊಡುತ್ತಿರುವುದೇನು?



ನಾವು ಬದುಕುಳಿಯುವುದಕ್ಕೆ ಅಗತ್ಯವಿರುವ ಎಲ್ಲವನ್ನೂ ಪರಿಸರದಿಂದಲೇ ಪಡೆಯುತ್ತಿದ್ದೇವೆ. ಪರಿಸರ ಕೊಡುವ ನೀರನ್ನು ಕುಡಿದು ಬದುಕುವ ನಾವು ಆ ನೀರನ್ನು ಇತರರು ಕುಡಿಯಲಾಗದ ಹಾಗೆ ಮಾಡುತ್ತಿದ್ದೇವೆ. ಪರಿಸರ ಒದಗಿಸುವ ಗಾಳಿಯನ್ನು ಉಸಿರಾಗಿ ತೆಗೆದುಕೊಳ್ಳುವ ನಾವು ಆ ಗಾಳಿಯನ್ನು ಮಲಿನಗೊಳಿಸುತ್ತಿದ್ದೇವೆ. ನಮಗೆ ಆಹಾರ ಒದಗಿಸುವ ಭೂಮಿಗೆ ರಾಸಾಯನಿಕಗಳನ್ನು ಸುರಿದು ಭೂಮಾಲಿನ್ಯಕ್ಕೆ ಕಾರಣರಾಗಿದ್ದೇವೆ. ಈ ಭೂಮಿ ಮತ್ತು ಇಲ್ಲಿನ ಸಂಪನ್ಮೂಲ ಕೇವಲ ಮನುಷ್ಯರ ಹಕ್ಕಲ್ಲ, ಅದು ಇಲ್ಲಿನ ಸಮಸ್ತ ಜೀವಿಗಳ ಹಕ್ಕು ಎಂಬ ಅರಿವು ನಮ್ಮೆಲ್ಲರಲ್ಲಿ ಇರಬೇಕು. ಸಕಲ ಜೀವಿಗಳ ಬಗ್ಗೆ ನಮಗೆ ಗೌರವ ಉಂಟಾದಾಗ ಮಾತ್ರ ನಾವು ಪರಿಸರಸ್ನೇಹಿ ಜೀವಿಗಳಾಗುತ್ತೇವೆ. ನಮಗೆ ಎಣಿಕೆ ಮೀರಿದ ಸೌಕರ್ಯಗಳನ್ನು ಒದಗಿಸುವ ಪರಿಸರವನ್ನು ಹಾಳುಮಾಡುವುದು ಅನೈತಿಕತೆ. ನಮಗೆ ಉಪಕಾರ ಮಾಡಿದವರಿಗೆ ಹಾನಿ ಮಾಡುವುದು ಕೃತಘ್ನತೆ ಮತ್ತು ಕ್ರೌರ್ಯ. ಪರಿಸರವನ್ನು ಸಂರಕ್ಷಿಸಿಕೊಳ್ಳುವುದರಲ್ಲಿ ಉದಾತ್ತ ಜೀವಪರ ಮತ್ತು ಜೀವನಪರ ಮೌಲ್ಯಗಳಿವೆ ಎಂಬುದನ್ನು ನಾವು ಮನಗಾಣಬೇಕು.